# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು –06

"ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿಹಬ್ಬದ ವರ್ಷಾಚರಣೆ ಜೂನ್-2021 ರಿಂದ ಜೂನ್-2022

ದಿನಾಂಕ: **11.03.2022**

## ಸಭಾ ನಡಾವಳಿ

ದಿನಾಂಕ 11.03.2022 ರಂದು CIQA ಸಾಮಾನ್ಯ ಸಭೆಯನ್ನು ಕರೆಯಲಾಯಿತು. ಮೊದಲಿಗೆ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳನ್ನು ಸಭೆಗೆ ಆಹ್ವಾನಿಸುವುದರ ಮುಖೇನ ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು :-**

1) ಮಾನ್ಯ ಕುಲಪತಿಗಳು

2) ಕುಲಸಚಿವರು

3) ಡೀನ್ (ಶೈಕ್ಷಣಿಕ)

4) ಡೀನ್ (ಅಧ್ಯಯನಕೇಂದ್ರ)

5) ಕುಲಸಚಿವ (ಪರೀಕ್ಷಾಂಗ)

6) ನಿರ್ದೇಶಕರು CIQA

7) ನಿರ್ದೇಶಕರು IT

8) ವಿಶೇಷಾಧಿಕಾರಿ ಡೀನ್ (ಶೈಕ್ಷಣಿಕ)

9) ಸಂಯೋಜನಾಧಿಕಾರಿ CIQA

**ಸಭೆಯಲ್ಲಿ ಮಂಡಿತ ವಿಷಯಗಳು:-**

1. 17ನೇ ಘಟಿಕೋತ್ಸವ ಕಾರ್ಯಕ್ರಮದ ಪ್ರಗತಿ ಕುರಿತು.
2. ವಿಜ್ಞಾನ ಪ್ರಯೋಗಾಲಯಗಳ ಉದ್ಘಾಟನೆ ಕುರಿತು.
3. ಲಕ್ಷ್ಮೀನಾರಾಯಣ ಫೌಂಡೇಶನ್ ಪೀಠ ಸ್ಥಾಪಿಸುವ ಬಗ್ಗೆ.
4. ವಿಜ್ಞಾನ ಹಬ್ಬ (Science Fest)ನ್ನು ಆಯೋಜಿಸುವ ಕುರಿತು.
5. ಪ್ರವೇಶಾತಿ ಪ್ರಚಾರಕ್ಕಾಗಿ ಸಂಚಾರಿ ಜಾಹೀರಾತು ವಾಹನವನ್ನು ಉಪಯೋಗಿಸಿಕೊಂಡು ಪ್ರವೇಶಾತಿ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸುವ ಬಗೆಗೆ.
6. ಸರ್ಕಾರದಿಂದ ಅನುಮೋದನೆಗೊಂಡು ರಾಜ್ಯಪತ್ರದಲ್ಲಿ ಪ್ರಕಟಿಸಲಾದ ವಿಶ್ವವಿದ್ಯಾನಿಲಯದ ಅಧ್ಯಾದೇಶಗಳು, ಪರಿನಿಯಮಗಳು ಹಾಗೂ ಕಾಯ್ದೆಗಳನ್ನು ಸಂರಕ್ಷಿಸಿಡುವ ಬಗೆಗೆ.
7. 2021-22ನೇ ಸಾಲಿಗೆ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಸಿದ್ಧಪಾಠಗಳನ್ನು ತ್ವರಿತವಾಗಿ ವಿತರಿಸುವ ಬಗೆಗೆ.

ಮೊದಲಿಗೆ ಪರೀಕ್ಷಾ ವಿಭಾಗದಲ್ಲಿ ಈಗಾಲೇ ನಿಗದಿಪಡಿಸಲಾಗಿರುವ 17ನೇ ಘಟಿಕೋತ್ಸವ ಕಾರ್ಯಕ್ರಮದ ಪ್ರಗತಿಯನ್ನು ತಿಳಿಸಲು ಸೂಚಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವ (ಪರೀಕ್ಷಾಂಗ) ರವರು ಈಗಾಗಲೇ ಅಂಕಪಟ್ಟಿಗಳ ಮುದ್ರಣ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಮುದ್ರಣ ಕಾರ್ಯವನ್ನು ಪೂರ್ಣಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ವಿಜ್ಞಾನ ವಿಭಾಗಗಳ ಪ್ರಯೋಗಾಲಯಗಳನ್ನು ದಿನಾಂಕ: 23.03.2022 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉದ್ಘಾಟನೆಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸುವಂತೆ ಮಾನ್ಯ ಕುಲಪತಿಗಳು CIQA ಸಂಯೋಜನಾಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಿದರು.

ಲಕ್ಷ್ಮೀನಾರಾಯಣ ಫೌಂಡೇಶನ್, ಬೆಂಗಳೂರು, ಇವರು ವಿಶ್ವವಿದ್ಯಾನಿಲಯದಲ್ಲಿ ಲಕ್ಷ್ಮೀನಾರಾಯಣ ಅಧ್ಯಯನ ಪೀಠವನ್ನು ಸ್ಥಾಪಿಸುವ ಸಂಬಂಧ ರೂ. 15 ಲಕ್ಷ ಠೇವಣಿಯನ್ನು ನೀಡಲು ಸಿದ್ಧವಿರುವುದಾಗಿ ತಿಳಿಸಿರುವುದರಿಂದ ಮಾನ್ಯ ಕುಲಪತಿಗಳು ಡೀನ್ (ಶೈಕ್ಷಣಿಕ) ವಿಭಾಗದಿಂದ ಅತೀ ತುರ್ತಾಗಿ ಅಗತ್ಯ ಕ್ರಮ ವಹಿಸಬೇಕೆಂದು ಸೂಚಿಸಿದರು.

ಕರಾಮುವಿಯಲ್ಲಿ ವಿಜ್ಞಾನ ಹಬ್ಬ (Science Fest)ನ್ನು ಆಯೋಜಿಸುವ ಕುರಿತು CIQA ನಿರ್ದೇಶಕರು ಸಭೆಯಲ್ಲಿ ಪ್ರಸ್ತಾಪಿಸಿದರು. ತದ ನಂತರ ಈ ಕಾರ್ಯಕ್ರಮಕ್ಕೆ ಅಂದಾಜು ವೆಚ್ಚವಾಗಿ ಸುಮಾರು ರೂ. 25 ಲಕ್ಷ ಹಣ ಬೇಕಾಗಬಹುದು ಎಂಬುದನ್ನು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ಸವಿಸ್ತಾರವಾದ ರೂಪುರೇಷೆಗಳನ್ನು ಸಿದ್ಧಪಡಿಸಿದಲ್ಲಿ ಮುಂಬರುವ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿ, ಅನುಮೋದನೆ ಪಡೆದ ನಂತರ CIQA ವಿಭಾಗದಿಂದ ಮುಂದಿನ ಕ್ರಮವಹಿಸಬಹುದೆಂದು ಸೂಚಿಸಿದರು.

ವಿಶ್ವವಿದ್ಯಾನಿಲಯದ ಪ್ರವೇಶಾತಿ ಪ್ರಚಾರಕ್ಕಾಗಿ ಸಂಚಾರಿ ಜಾಹೀರಾತು ವಾಹನವನ್ನು ಉಪಯೋಗಿಸಿಕೊಂಡು ಪ್ರತಿ ಹಳ್ಳಿಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳನ್ನು ಉನ್ನತ ಶಿಕ್ಷಣ ವಂಚಿತ ವಿದ್ಯಾರ್ಥಿಗಳಿಗೆ ತಲುಪುವಂತೆ ಮಾಡಿದಲ್ಲಿ ಮುಂಬರುವ ದಿನಗಳಲ್ಲಿ ಪ್ರವೇಶಾತಿ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಬಹುದೆಂದು ಮಾನ್ಯ ಕುಲಪತಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಸಿದ್ಧಪಡಿಸಲಾದ ಅಧ್ಯಾದೇಶಗಳು, ಪರಿನಿಯಮಗಳು ಹಾಗೂ ಕಾಯ್ದೆಗಳನ್ನು ಸಾಮಾನ್ಯ ವಿಭಾಗದಿಂದ ಸರ್ಕಾರಕ್ಕೆ ಸಲ್ಲಿಸಿದ್ದು, ಅವುಗಳು ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡಿರುವುದರಿಂದ, ಅವುಗಳನ್ನು ಬೈಂಡಿಂಗ್ ಮಾಡಿಸಿ ಸಂಬಂಧಪಟ್ಟ ಎಲ್ಲಾ ವಿಭಾಗಗಳಿಗೂ ಒಂದೊಂದು ಪ್ರತಿಯನ್ನು ವಿತರಿಸಿ ಹಾಗೂ ಒಂದನ್ನು ರಕ್ಷಾ ಕಡತದಲ್ಲಿಡುವಂತೆ ಮಾನ್ಯ ಕುಲಪತಿಗಳು ಸಾಮಾನ್ಯ ವಿಭಾಗಕ್ಕೆ ನಿರ್ದೇಶನ ನೀಡುವಂತೆ ಕುಲಸಚಿವರಿಗೆ ಸೂಚಿಸಿದರು.

ಸಿದ್ಧಪಾಠಗಳನ್ನು ಯಾವ ಯಾವ ವಿಭಾಗದವರು ಇದುವರೆವಿಗೂ ಸಲ್ಲಿಸಿರುವುದಿಲ್ಲವೋ ಅಂತಹ ವಿಭಾಗಗಳಿಗೆ ತುರ್ತಾಗಿ ಟಿಪ್ಪಣಿಯನ್ನು ನೀಡಿ ಆದಷ್ಟು ಬೇಗ ವಿದ್ಯಾರ್ಥಿಗಳಿಗೆ ಸಿದ್ಧಪಾಠಗಳನ್ನು ವಿತರಿಸುವ ಸಂಬಂಧ ಅಗತ್ಯ ಕ್ರಮ ವಹಿಸುವಂತೆ ಡೀನ್ (ಶೈಕ್ಷಣಿಕ)ರವರಿಗೆ ಮಾನ್ಯ ಕುಲಪತಿಗಳು ಸೂಚಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

Niranjana Raj S.
ನಿರ್ದೇಶಕರು CIQA

ಕುಲಪತಿಗಳು

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು –06

"ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿಹಬ್ಬದ ವರ್ಷಾಚರಣೆ ಜೂನ್-2021 ರಿಂದ ಜೂನ್-2022

ಸಂಖ್ಯೆ: ಕರಾಮುವಿ/CIQA-01/2019-20

ದಿನಾಂಕ: 07-03-2022

## ಸಭಾ ಸೂಚಿ

ವಿಷಯ : CIQA ಸಮಿತಿಯ ಸಾಮಾನ್ಯ ಸಭೆಯನ್ನು ಆಯೋಜಿಸಿರುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ CIQA ಸಮಿತಿಯ ಸಾಮಾನ್ಯ ಸಭೆಯನ್ನು ದಿನಾಂಕ: 11.03.2022ರ ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ BOM ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಸದರಿ ಸಭೆಗೆ ಸಮಿತಿಯ ಎಲ್ಲಾ ಸದಸ್ಯರು ಹಾಜರಾಗುವಂತೆ ಈ ಮೂಲಕ ಕೋರಿದೆ.

Hiranjan Raj S.
ನಿರ್ದೇಶಕರು (CIQA)
7/3/22

ಗೆ,

CIQA ಸಮಿತಿಯ ಮಾನ್ಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು, ಕರಾಮುವಿ, ಮೈಸೂರು.

ಪ್ರತಿ:

1. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಶಾಖೆ, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಕಚೇರಿ ಪ್ರತಿ.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು –06

ದಿನಾಂಕ: 28.06.2021

## ಸಭಾ ನಡಾವಳಿ

ದಿನಾಂಕ 28/06/2021 ರಂದು ಬೆಳಗ್ಗೆ 11.30ಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ BOM ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ: ವಿದ್ಯಾಶಂಕರ್ ಎಸ್. ಇವರ ಅಧ್ಯಕ್ಷತೆಯಲ್ಲಿ ನಡೆದ CIQA ಸಮಿತಿಯ ಸಾಮಾನ್ಯ ಸಭಾ ನಡಾವಳಿ.

**ಸಭೆಯಲ್ಲಿ ಹಾಜರಿದ್ದ ಸದಸ್ಯರು :-**

| | | |
|---|---|---|
| 1 | ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2 | ಕುಲಸಚಿವರು | ಸದಸ್ಯರು |
| 3 | ಡೀನ್ ಶೈಕ್ಷಣಿ | ಸದಸ್ಯರು |
| 4 | ನಿರ್ದೇಶಕರು (CIQA) | ಸದಸ್ಯರು |
| 5 | ಹಣಕಾಸು ಅಧಿಕಾರಿಗಳು | ಸದಸ್ಯರು |
| 6 | ಡಾ. ರಾಜೇಶ್ವರಿ ಹೆಚ್. ವಿಶೇಷಾಧಿಕಾರಿಗಳು, ಡೀನ್ (ಶೈಕ್ಷಣಿಕ) | ಸದಸ್ಯರು |
| 7 | ಶಿಕ್ಷಣಶಾಸ್ತ್ರ | ಸದಸ್ಯರು |
| 8 | ಅರ್ಥಶಾಸ್ತ್ರ ವಿಭಾಗದ ಅಧ್ಯಕ್ಷರು | ಸದಸ್ಯರು |
| 9 | ವಾಣಿಜ್ಯಶಾಸ್ತ್ರ ವಿಭಾಗದ ಅಧ್ಯಕ್ಷರು | ಸದಸ್ಯರು |
| 10 | ಪ್ರವೇಶಾತಿ ವಿಭಾಗದ ನಿರ್ದೇಶಕರು | ಸದಸ್ಯರು |
| 11 | ಡಾ. ವಿ. ಮಹೇಶ್, ಸಂಯೋಜನಾಧಿಕಾರಿ, CIQA | ಸಂಚಾಲಕರು |

**ಸಭೆಯಲ್ಲಿ ಗೈರುಹಾಜರಾಗಿದ್ದ ಸದಸ್ಯರು.**

| | | |
|---|---|---|
| 1. | ಡಾ. ತೇಜಸ್ವಿ ನವಿಲೂರು, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ | ಸದಸ್ಯರು |
| 2. | ರಸಾಯನಶಾಸ್ತ್ರ ವಿಭಾಗದ ಅಧಕ್ಷರು | ಸದಸ್ಯರು |
| 3. | Dr. T.N. Srinivasa, Principal, Atria Institute of Technology | ಬಾಹ್ಯ ಸದಸ್ಯರು |
| 4. | Dr. Subramanya, Principal, R.V. College of Engineering. | ಬಾಹ್ಯ ಸದಸ್ಯರು |

ಮೊದಲಿಗೆ ಮಾನ್ಯ ಕುಲಪತಿಗಳು ಸಭೆಯನ್ನುದ್ಧೇಶಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಆರಂಭಿಸಿದರು.

2022-2023ನೇ ಸಾಲಿನವರೆಗೆ ಯುಜಿಸಿ ಮಾನ್ಯತೆ ನೀಡಿದ್ದು, ಎಲ್ಲಾ ಶಿಕ್ಷಣಕ್ರಮಗಳ ಮಾನ್ಯತೆ ಅವಧಿಯು 2023ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹಾಗೂ NAAC ಮಾನ್ಯತೆಯನ್ನು ಎಲ್ಲಾ ಮುಕ್ತ ಹಾಗೂ ದೂರಶಿಕ್ಷಣ Modeಗಳಡಿಯಲ್ಲಿ ಕಾರ್ಯ ನಿರ್ವಹಿಸುವ ವಿಶ್ವವಿದ್ಯಾನಿಲಯಗಳು ಮರು ನವೀಕರಿಸಲು ಮುಂಚಿತವಾಗಿ NAAC ಮಾನ್ಯತೆ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಇದರ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ವಿಷಯವನ್ನು ತಿಳಿಸಿರುತ್ತಾರೆ. NAAC ಮಾನ್ಯತೆಯ ಕಾರ್ಯವು ತುರ್ತಾಗಿ

ಆಗಬೇಕಾಗಿರುವುದರಿಂದ NAAC ಘಟಕವನ್ನು ಸ್ಥಾಪಿಸಿ, ಸದರಿ ಘಟಕಕ್ಕೆ ಡಾ॥ ಹೇಚ್. ರಾಜೇಶ್ವರಿ, ಸಹಾಯಕ ಪ್ರಾಧ್ಯಾಪಕರು, ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ, ಇವರನ್ನು ನ್ಯಾಕ್ ಸಂಯೋಜನಾಧಿಕಾರಿಯನ್ನಾಗಿ ನೇಮಕ ಮಾಡಲು ಹಾಗೂ ಸಂಯೋಜನಾಧಿಕಾರಿಯವರೊಂದಿಗೆ ಕಾರ್ಯನಿರ್ವಹಿಸಲು ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಲು ಹಾಗೂ ಕಂಪ್ಯೂಟರ್ ಪರಿಕರ ಮತ್ತು ಜೆರಾಕ್ಸ್ ಯಂತ್ರವನ್ನು ಒದಗಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

<u>ಅಗತ್ಯ ಸಿಬ್ಬಂದಿಗಳ ವಿವರ:</u>

| | | |
|---|---|---|
| 1. ಸಹಾಯಕ ಕುಲಸಚಿವ | – | 01 |
| 2. ಅಧೀಕ್ಷಕ | – | 01 |
| 3. ಪ್ರ.ದ.ಗು. | – | 01 |
| 4. ದ್ವಿ.ದ.ಗು. | – | 01 |
| 5. ಡೇಟಾ ಎಂಟ್ರಿ ಆಪರೇಟರ್ | – | 01 |
| 6. ಅಟೆಂಡರ್ | – | 02 |

ಪ್ರೊ. ವೆಂಕಯ್ಯ, ವಿಶ್ರಾಂತ ಕುಲಪತಿಗಳು, ಕೃಷ್ಣ ವಿಶ್ವವಿದ್ಯಾನಿಲಯ, ಹೈದರಾಬಾದ್, ಇವರನ್ನು ನ್ಯಾಕ್ ಸಲಹೆಗಾರರು (Consultant) ಆಗಿ ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿತು.

Academic Canlender ಸಿದ್ಧಪಡಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

CBCS ಮಾರ್ಗಸೂಚಿ ಅನ್ವಯ ಹೊಸ ಶಿಕ್ಷಣಕ್ರಮಗಳ PPRಗಳನ್ನು ವಿವಿಧ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳಿಗೆ ಸಿದ್ಧಪಡಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

NAAC ಪ್ರಕ್ರಿಯೆಗೆ ಅನುಕೂಲವಾಗಲು ವಿಶ್ವವಿದ್ಯಾನಿಲಯದ ಎಲ್ಲಾ ಮಾಹಿತಿಯನ್ನು ಒಳಗೊಂಡಂತಹ Hand Book ಅನ್ನು ಸಿದ್ಧಪಡಿಸಲು ಸಮಿತಿಯೊಂದನ್ನು ರಚಿಸಲು ಮಾನ್ಯ ಕುಲಪತಿಗಳು ನಿರ್ದೇಶಿಸಿದರು.

Audio ಘಟಕವನ್ನು ಸ್ಥಾಪಿಸುವ ಬಗ್ಗೆ ಹಾಗೂ ವರ್ಷಕ್ಕೆ 20 ಕಾರ್ಯಕ್ರಮಗಳನ್ನು ನೀಡುವ ಬಗೆಗೆ ಘಟಕದ ಸಂಯೋಜನಾಧಿಕಾರಿಯೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು.

Video ಕಾರ್ಯಕ್ರಮಗಳನ್ನು ನೀಡಲು ಸೂಕ್ತ ಸ್ಥಳಾವಕಾಶವನ್ನು ಕಲ್ಪಿಸುವಂತೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ವಿಶ್ವವಿದ್ಯಾನಿಲಯವು 25 ವರ್ಷಗಳನ್ನು ಪೂರೈಸಿದ್ದು, ಈ ಹಿನ್ನೆಲೆಯಲ್ಲಿ ರಜತ ಮಹೋತ್ಸವವನ್ನು ಆಚರಿಸುವ ಬಗ್ಗೆ ಸಮಿತಿಯನ್ನು ರಚಿಸಲು ಸಭೆಯ ಗಮನಕ್ಕೆ ತಂದರು.

ಅಂತಿಮವಾಗಿ CIQA ಸಮಿತಿಯ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

Niranjan Raj S.

**ನಿರ್ದೇಶಕರು(CIQA)**

**Centre for Internal Quality Assurance (CIQA)**
**Karnataka State Open University, Mukthagangotri, Mysuru-570006**

Minutes of the 9th Meeting of CIQA held on 20-12-2019.

The 9th Meeting of the Centre of Internal Quality Assurance (CIQA) was held on 20-12-2019 at 12.00 noon in the Office of the CIQA, Karnataka State Open University, Mukthagangotri, Mysuru-570006.

Members Present

| Sl. No. | Name | Designation | Signature |
|---|---|---|---|
| 1. | Dr. Niranjan Raj S | Chairman | Niranjan Raj S. 20/12/19 |
| 2. | Dr. Nataraju Angaswamy | Member | [signature] |
| 3. | Dr. Hemalatha, M.S. | Member | [signature] 20/12/19 |
| 4. | Dr. Mahadevaswamy.P | Member | [signature] 20-12-2019 |
| 5. | Dr. Umashankara, M. | Member | [signature] |
| 6. | Mr. Manjunatha, C.S. | Member | [signature] |
| 7. | Mr. Niranjana, S.V. | Member | [signature] |
| 8. | Dr. Mahehsa, D.M. | Member | [signature] |
| 9. | Mrs. Suneetha | Member | [signature] |
| 10. | Dr. N.G. Raju | Member Special Invitee | [signature] |

The meeting commenced with a welcome to all the members by the Director, CIQA.

Following were the agenda and decision of the meeting:

**Agenda 1:** Proposal to commence the following new courses in various departments of the University:

| Sl. No. | Name of the New Programmes Proposed |
|---|---|
| 1. | Bachelor of Science (B.Sc.) |
| 2. | Bachelor of Business Administration (B.B.A.) |
| 3. | Bachelor of Computer Application (B.C.A.) |
| 4. | Bachelor of Information Technology (B.I.T.) |
| 5. | Master of Arts in Education (M.A.E.) |

Niranjan Raj S

Director
Centre for Internal Quality Assurance
Karnataka State Open University
Mukthagangothri, Mysuru-570 006

P.T.O.

| | |
|---|---|
| 6. | Master of Arts in Telugu (M.A. Telugu) |
| 7. | Master of Science in Information Technology (M.I.T.) |
| 8. | Master of Science in Botany (M.Sc. Botany) |
| 9. | Master of Science in Zoology (M.Sc. Zoology) |
| 10. | Master of Science in Food Science and Nutrition (M.Sc. Food Science and Nutrition) |
| 11. | Master of Law (L.L.M.) |
| | |

**Decision:** The proposal for launching the above mentioned courses was unanimously approved.

**Agenda 2:** Finalization of PPR of new courses to be submitted to UGC.

**Decision:** PPRs for the above listed UG and PG level Degree programs were reviewed, All PPRs were found to be compliant with the requirements of the UGC-ODL Regulations 2017, and therefore CIQA resolved to approve these PPRs mentioned above.

**Agenda 3:** Preparation of SLMs for the above listed courses

**Decision:** CIQA observed that the SLMs designed and being prepared for the above mentioned programmes of various departments of KSOU meet the required standards, hence the preparation of SLMs were approved. It was also noted that for the above programmes mentioned the preparation of SLMs were in progress.

The meeting ended with a vote of thanks to the chair.

Niranjan Raj S.
Director 20/12/19

Director
Centre for Internal Quality Assuran
Karnataka State Open Universit
Mukthagangothri, Mysuru-570 0